## ಭತ್ತ ಬಾಳೆಗೆ 300, ಕಬ್ಬಿಗೆ 400 ತೆರಿಗೆ

# ನೀರು ಬಳಕೆಗೆ ತೆರಿಗೆ ವಿಧಿಸಲು ನಿರ್ಣಯ



ಗಂಗಾವತಿ ತಾಲ್ಲೂಕಿನ ಆನೆಗೊಂದಿಯಲ್ಲಿ ಮಂಗಳವಾರ ನಡೆದ ನೀರು ಬಳಕೆದಾರರ ಸಂಘದ ಸಭೆ

**ಪ್ರಜಾಪರ್ವ ವಾರ್ತೆ**
**ಗಂಗಾವತಿ ಸೆ20:** ಕೃಷಿ ಚಟುವಟಿಕೆ ಕೈಗೊಳ್ಳಲು ಹಾಗೂ ತೋಟಗಾರಿಕಾ ಬೆಳೆ ಬೆಳೆದುಕೊಳ್ಳಲು ಉಪಯೋಗಿಸುವ ನೀರಿಗೆ ವಾರ್ಷಿಕವಾಗಿ ಪ್ರತಿ ಎಕರೆಗೆ ಭತ್ತ ಬಾಳೆಗೆ ತಲಾ ರೂ. 300 ಹಾಗೂ ಕಬ್ಬಿನ ಬೆಳೆಗೆ 400 ಪಾವತಿಸಲು ರೈತರು ಒಪ್ಪಿಕೊಂಡಿದ್ದಾರೆ.

ತಾಲ್ಲೂಕಿನ ಆನೆಗೊಂದಿಯಲ್ಲಿ ಮಂಗಳವಾರ ಆನೆಗೊಂದಿ ನೀರು ಬಳಕೆದಾರರ ಸಂಘದ ಅಧ್ಯಕ್ಷ ಸುದರ್ಶನ ವರ್ಮಾ ಅಧ್ಯಕ್ಷತೆಯಲ್ಲಿ ಸಂಘದ ಕಚೇರಿಯಲ್ಲಿ ನೀರು ಬಳಕೆದಾರರ 42ನೇ ವಾರ್ಷಿಕ ಮಹಾಸಭೆ ನಡೆಯಿತು.

ಈ ಸಭೆಯಲ್ಲಿ ಪ್ರತಿ ಎಕರೆಗೆ ಪರಿಷ್ಕರ ಧರ ಪ್ರಕಟಿಸಲಾಯಿತು. ಇದಕ್ಕೆ ರೈತರು ಒಪ್ಪಿಗೆ ಸೂಚಿಸಿದರು. ಸಂಗ್ರಹವಾಗುವ ತೆರಿಗೆ ಹಣವನ್ನು ರೈತರ ಅನುಕೂಲಕ್ಕೆ ಮರುಬಳಕೆ ಮಾಡುವ ಬಗ್ಗೆ ಸಭೆಯಲ್ಲಿ ಚರ್ಚೆ ಮಾಡಲಾಯಿತು.

2020–21ನೇ ಸಾಲಿನಿಂದಲೇ ಈ ತೆರಿಗೆ ಅನ್ವಯಿಸಲಿದ್ದು ಎಲ್ಲರೂ ಪಾವತಿಸುವಂತೆ ಮನವಿ ಮಾಡಲಾಯಿತು. ಬಹುತೇಕರ ರೈತರು ಹಿಂಗಾರು ಮತ್ತು ಮುಂಗಾರು ಬೆಳೆಗಳ ತೆರಿಗೆ ಪಾವತಿಗೆ ಒಪ್ಪಿಗೆ ಸೂಚಿಸಿದರು. 2021–21ನೇ ಸಾಲಿನ ವರದಿ ವಾಚನ ಮಾಡಲಾಯಿತು.

ಸಂಘದ ವ್ಯಾಪ್ತಿಯಲ್ಲಿ ಬರುವ ರೈತರ ಗಡಿ ಭಾಗದ ಸಮಸ್ಯೆ ಎದುರಾದಲ್ಲಿ ಪರಸ್ಪರ ಒಪ್ಪಿಗೆ ಆಧಾರದಲ್ಲಿ ಸಮಸ್ಯೆ ಇತ್ಯರ್ಥ ಪಡಿಸಿಕೊಳ್ಳುವ ಬಗ್ಗ ಆದ್ಯತೆ ನೀಡಲಾಯಿತು. ಸಂಘದಲ್ಲಿ ಮಹಿಳಾ ರೈತರ ಸಂಖ್ಯೆ ಹೆಚ್ಚಿಸಲು ಗುರಿ ನಿಗಧಿ ಮಾಡಿಕೊಳ್ಳಲಾಯಿತು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಎಸ್.ವಿ. ರಾಮರಾವ್, ಕಾರ್ಯದರ್ಶಿ ಸಿದ್ದಯ್ಯ ಹಿರೇಮಠ, ಮಾಜಿ ಉಪಾಧ್ಯಕ್ಷ ಮಹೆಬೂಬ ಹುಸೇನ್, ಚಂದ್ರಶೇಖರ ಭತ್ತದ, ನಾಗೇಶ ಮೆಟ್ರಿ, ಅಂಜನಪ್ಪ ಅಂಬಿಗೇರಿ, ಶ್ರೀನಿವಾಸ ಕೊರಮ್ಮ ಕ್ಯಾಂಪ್, ಕೋಟೇಶ ಆನೆಗೊಂದಿ, ರಮೇಶ ಕಲ್ಯಾಣಕರ, ನಾಗೇಶ ಮೆಟ್ರಿ, ಈರಯ್ಯ ಶೆಟ್ಟಿ ಇಲ್ಲೂರು, ಗ್ರಾಮ ಪಂಚಾಯಿತಿ ಸದಸ್ಯ ಮಲ್ಲಿಕಾರ್ಜುನ ಹಿರೇಮಠ ಇದ್ದರು.

Prajaparva, 20.9.2022